**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1351/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಕುಮಾರ** | ಪ್ರಾಸಾಃ 5 |
| ತಂದೆಯ/ಗಂಡನ ಹೆಸರು | | ಬಸವನಾಯಕ | ಚಾಸಾಃ 5 |
| ವಯಸ್ಸು | | 29 ವರ್ಷ | |
| ಕೆಲಸ | | ಎಲೆಕ್ಟ್ರಿಕ್ ವರ್ಕ್ | ಸಾ ಪ್ರ ಬೋ |
| ವಾಸ | | ಹೆಡತಲೆ ಗ್ರಾಮ | ದಿಃ 17/01/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿತರು ಗೊತ್ತು. ಚಾಸಾ-1 ರಿಂದ 4 ಮತ್ತು 6 ರಿಂದ 8 ಗೊತ್ತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಮತ್ತು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ನೈಟಿ, ಟವಲ್ ಮತ್ತು ಮಚ್ಚನ್ನು ನೋಡಿ ಗುರುತಿಸಿಲ್ಲ.
(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿನಾಂಕ 25.03.2014 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಹೆಡತಲೆ ಗ್ರಾಮದ ಚಾಸಾ-1 ರವರ ವಾಸದ ಮನೆಯ ಮುಂಭಾಗ ಆರೋಪಿತರುಗಳು ಚಾಸಾ-1 ರವರ ವಾಸದ ಮನೆಯ ಗೋಡೆಗೆ ದಿನಾಂಕ 21.03.2014 ರ ರಾತ್ರಿ ಮೂತ್ರ ವಿಸರ್ಜನೆ ಮಾಡಿದ್ದು ಸದರಿ ವಿಚಾರವನ್ನು ಚಾಸಾ-1 ರವರು ಕೇಳಿದ್ದಕ್ಕೆ ಆರೋಪಿತರುಗಳು ಚಾಸಾ-1 ರವರಿಗೆ ಬೋಳಿ ಮಗನೇ, ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಚಾಸಾ-2 ರವರನ್ನು ಹಿಡಿದು ಎಳೆದಾಡಿ ಕೆಳಕ್ಕೆ ಕೆಡವಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ-2 ರವರ ಮಾನಭಂಗಕ್ಕೆ ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಚಾಸಾ-2 ರವರಿಗೆ ಕಾಲಿನಿಂದ ಹೊಟ್ಟೆಗೆ ಒದ್ದು ಕೈಗಳಿಂದ ಮುಖಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಚಾಸಾ-3 ರವರು ಹೋದಾಗ ಆರೋಪಿತರು ಕಾಲಿನಿಂದ ಅವರ ಹೊಟ್ಟೆಗೆ ಒದ್ದು ಕೊಲೆ ಬೆದರಿಕೆ ಹಾಕಿರುತ್ತಾರೆ

ಎಂದರೆ ಸರಿಯಲ್ಲ. ಜಗಳ ಬಿಡಿಸಲು ಚಾಸಾ-4 ರವರು ಹೋದಾಗ 1 ಮತ್ತು 2 ನೇ ಆರೋಪಿತರು ಮಚ್ಚಿನಿಂದ ಅವರ  ತಲೆಯ ಹಿಂಭಾಗಕ್ಕೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 29.03.2014 ರಂದು ಈಗ ನನಗೆ ಓದಿ ಹೇಳಿದಂತೆ "  ದಿನಾಂಕ 25.03.2014 ರಂದು -------- ನೋಡಿದರೆ ಗುರುತಿಸುತ್ತೇನೆ" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ನಾವು ಮತ್ತು ಆರೋಪಿತರು ಒಂದೇ ಗ್ರಾಮದವರು ಎಂದರೆ ಸರಿ. ಈಗ ನಾವು ಮತ್ತು ಆರೋಪಿತರು ಗ್ರಾಮದ ಹಿರಿಯರ ಸಮಕ್ಷಮ  ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ.  ಆದ್ದರಿಂದ ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**